ಇಂದು ಇಲ್ಲ ಎನಬೇಡ ಕೇಳಿದಷ್ಟು ಮಧುವನು
ತುಂಬಿಕೊಡು ಸಾಕಿ
ಮನದ ಸಿಂಪಿನೊಡೆದು ಎಣಿಸಬೇಕಿದೆ ನೋವನು
ತುಂಬಿಕೊಂಡು ಸಾಕಿ

ಎನ್ನುವ ನೋವಿನ ಸಾಲುಗಳು ಮುಂದೆ ಸ್ವಚ್ಛಂದವಾಗುವ ಪರಿಯನ್ನು ನಾವು ಗಜಲ್‌ಗಳಲ್ಲಿ ಕಾಣಬಹುದು. ಬಯಲು ಸೀಮೆಯ ಬಿಸಿಲು ಕಾವ್ಯದಲ್ಲಿ ಶಾಂತರಸರು ಉಸಿರು ಬಿಕ್ಕುತ್ತದೆ ಎನ್ನುತ್ತಾರೆ.

ನನ್ನೆದೆಯ ಕಳವಳವು ಅವಳ ಸಂಗೀತದಲ್ಲಿ ತೇಲಿ
ಬಂತು
ಅವಳ ಜೀವನ ದ್ರವ್ಯ ನನ್ನ ಮೈಮಾಟದಲಿ
ತುಂಬಿ ಬಂತು
ಅವಳ ಉಸಿರಿನ ಕಂಪು ದಶದಿಕ್ಕುಗಳಲ್ಲಿ ಬಂತು

ಎಂಬ ಸಾಲುಗಳು ಪಾರಮಾರ್ಥಿಕ ಕಲ್ಪನೆಗಳಲ್ಲಿ ಮಾತಾಡುತ್ತವೆ. ಅಲ್ಲಮನ 'ಒಲುಮೆಯ ಕೂಟಕ್ಕೆ ಹಾಸಿನ ಹಂಗೇಕೆ' ಎನ್ನುವ ಮಾತಿನಂತೆ, ಅಕ್ಕನ ವಚನದ 'ಉಸುರಿನ ಪರಿಮಳವಿರಲು, ಕುಸುಮದ ಹಂಗೇಕಯ್ಯ' ಎನ್ನುವ ಸಾಲಿನಂತೆ, ಶಾಂತರಸರ ಸಾಲುಗಳು ಸಹ ಪಂಚಭೂತಗಳ ಭೂಮಿಕೆಯಲ್ಲಿ ಎಲ್ಲವನ್ನೂ ಸಾಧ್ಯವಾಗಿಸುವ ಕುರಿತು ಹೇಳುತ್ತವೆ.

ಶಾಂತರಸರ ಕಥೆಗಳಲ್ಲಿ ನನಗೆ ಬಹುವಾಗಿ ಕಾಡುವ ಮೂರು ಕಥೆಗಳ ಬಗ್ಗೆ ಇಲ್ಲಿ ಹೇಳಬೇಕು: 'ಬಡೆಸಾಬ್ ಪುರಾಣ', 'ಮಲ್ಕಮ್ಮ' ಹಾಗೂ 'ನೀಲಗಂಗಾ ಗುರುಪಾದ ಮತ್ತು ಒಂದು ರೂಪಾಯಿ'.

ಬಡೇಸಾಬ್ ಪುರಾಣ, ಆ ಕಾಲಘಟ್ಟದಲ್ಲಿ ನಡೆದ ಚಾರಿತ್ರಿಕ ಘಟನೆಗಳಾದ ರಜಾಕಾರರ ಪಳೆಯುಳಿಕೆಯಾಗಿ ಹಳ್ಳಿಯಲ್ಲಿ ಬೀಡುಬಿಟ್ಟದ್ದ ಬಡೇಸಾಬನ ಕ್ರೌರ್ಯವನ್ನು ಹೇಳುತ್ತದೆ. ಹಳ್ಳಿಗೆ ವ್ಯಾಪಾರ ಮಾಡಲು ಬಂದು ಊರನ್ನು ಆಪೋಶನ ತೆಗೆದುಕೊಳ್ಳುವ ಕ್ರಿಯೆಯಲ್ಲಿ ಪಾಲ್ಗೊಳ್ಳುವ ಬಡೇಸಾಬ್, ಹೈದ್ರಾಬಾದ್ ಪ್ರಾಂತ್ಯದಲ್ಲಿ ಕಾಶೀಂ ರಜ್ವಿ ಕುಖ್ಯಾತಿ ಪಡೆದಂತೆ ತನ್ನ ಹಳ್ಳಿಯ ಸುತ್ತಲಿನ ಜನಕ್ಕೆ ಕ್ರೌರ್ಯದ ಮುಖಾಂತರ ಪರಿಚಿತನಾದವನು. 'ಬಡೇಸಾಬ್ ಪುರಾಣ' ಕಥೆಯು ನಮ್ಮಲ್ಲಿ ಒಂದು ರೀತಿಯ ಭಯ, ವಿಷಾದ, ಐತಿಹಾಸಿಕ ಪ್ರಮಾದಗಳ ಪುರಾಣವನ್ನು ಬಿಚ್ಚಿಡುತ್ತದೆ

'ಮಲ್ಕಮ್ಮ'ನ ಕಥೆಯ ಮಲ್ಕಮ್ಮ ಹತ್ತಿ ಬಿಡಿಸುವ ಕಾಯಕ ಮಾಡುವವಳು. ಗುರಪ್ಪನೆಂಬ ಫ್ಯೂಡಲ್ ವ್ಯಕ್ತಿಯ ಕಣ್ಣು ಆಕೆಯ ಮೇಲೆ ಬೀಳುತ್ತದೆ. ಆಕೆಯ ಗಂಡ ತಿಮ್ಮಣ್ಣನಿಗೆ ಇಸ್ಪೀಟು, ಕುಡಿತದ ಚಟ ಹತ್ತಿಸಿ ಮನೆಯನ್ನು ಬರೆಸಿಕೊಂಡು, ಮಲ್ಕಮ್ಮನನ್ನು ಪಡೆಯುವ ಕುತಂತ್ರ ಗುರಪ್ಪನದು. ಒಂದು ರಾತ್ರಿ ತಿಮ್ಮಣ್ಣನ ಸಹಾಯದಿಂದ ಮಲ್ಕಮ್ಮನ ಮೇಲೆ ದಾಳಿ ಮಾಡಲು ಬಂದ ಗುರಪ್ಪ ಆಕೆಯಿಂದ ಇಕ್ಕಿಸಿಕೊಂಡು ಮನೆ ಸೇರುತ್ತಾನೆ. ನಂತರ ತಿಮ್ಮಣ್ಣ ಊರಿನಿಂದ ನಾಪತ್ತೆಯಾಗುತ್ತಾನೆ. ಮಲ್ಕಮ್ಮಳಿಗೆ ಆಪದ್ಬಾಂಧವನಾಗಿ ಬರುವ ಬೂದೆಣ್ಣ ಊರವರ ಆಪಾದನೆಗಳನ್ನು ಅನುಮಾನಗಳನ್ನು ತನ್ನ ಮೈಮೇಲೆ ಎಳೆದುಕೊಳ್ಳುತ್ತಾನೆ. ಊರವರಿಗೆ ಉತ್ತರಿಸುವುದು ಸಾಕಾಗಿ ಕೊನೆಗೆ ವಿಧುರ ಬೂದೆಣ್ಣ, ಒಂಟಿಯಾಗಿದ್ದ ಮಲ್ಕಮ್ಮ ಒಂದಾಗುತ್ತಾರೆ. ಹಳ್ಳಿಯಲ್ಲಿ ನಡೆಯುವ ರಾಜಕೀಯ, ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯ, ಫ್ಯೂಡಲ್ ಮನಸ್ಥಿತಿಯ ಅಬ್ಬರದ ಮಧ್ಯೆ ಮಲ್ಕಮ್ಮನಂತಹವರು ಹೇಗೆ ಅಸಹಾಯಕರಾಗುತ್ತಾರೆ ಎನ್ನುವಂತೆ ಕಂಡರೂ, ಹಳ್ಳಿಯ ಜನರಲ್ಲಿ ಇರುವ ಸ್ಥಿತಿ ಸ್ಥಾಪಕತ್ವ ಗುಣ, ಸತ್ತು ಬದುಕುವ ಪರಿಯನ್ನು ಈ ಕಥೆ ನಮಗೆ ಕಾಣಿಸುತ್ತದೆ. ಹಳ್ಳಿಯಲ್ಲಿ ಯಾವಾಗಲೂ ಒಂದು ಮಾತು ಇದೆ, 'ನಾವು ಈಗಾಗಲೇ ಸತ್ತು ಬದುಕಿದ್ದೇವೆ' ಎಂದು. ಆ ಸತ್ತು ಬದುಕಿದ ಕಥೆ ಮಲ್ಕಮ್ಮನಂತಹ ಮಹಿಳೆಯರದಾಗಿರುತ್ತದೆ ಎನ್ನುವುದನ್ನು ಶಾಂತರಸರು ನಮಗೆ ಕಥೆಯ ಮೂಲಕ ಕಟ್ಟಿ ಕೊಡುತ್ತಾರೆ.

'ನೀಲಗಂಗಾ ಗುರುಪಾದ ಮತ್ತು ಒಂದು ರೂಪಾಯಿ' ಅಕ್ಷರ ಕಾವ್ಯದಂತಹ ಕಥೆ. ವಚನ ಸಾಹಿತ್ಯದಲ್ಲಿ ಪರಿಣಿತನಾದ ಬಸಣ್ಣಿ, ಲಾತೂರಿನ ಹಿರೇಮಠದಲ್ಲಿ ಆಶ್ರಯ ಪಡೆದು ಓದುತ್ತಿರುವ ವಿದ್ಯಾರ್ಥಿ. ಅಲ್ಲಿಯ ವೀರಶೈವ ತರುಣ ಸಂಘದಲ್ಲಿ ಸಕ್ರಿಯನಾಗಿ ಭಾಗವಹಿಸಿ, 'ಬಸವಣ್ಣಪ್ಪನೋರೆ' ಎಂಬ ವಿಶೇಷ ಅಭಿದಾನದಿಂದ ಎಲ್ಲರಿಂದಲೂ ಕರೆಸಿಕೊಳ್ಳುತ್ತಿರುತ್ತಾನೆ. ಊರಿನ ವರ್ತಕರು ಮತ್ತು ಶ್ರೀಮಂತರಾದ ಭೈರಪ್ಪನವರ ಮಗಳು ನೀಲಗಂಗಾಳ ಪರಿಚಯ ಅವನಿಗಾಗುತ್ತದೆ. ಸ್ನೇಹ ಪ್ರೇಮವಾಗುತ್ತದೆ.